ಓಂ ಶಾಂತಿ, ಬಾಪ್‌ದಾದಾ, ಅವ್ಯಕ್ತ ಮುರಳಿ 23-01-1976--ಪಾರ್ಟ್-1.

(संकल्प, वाणी और स्वरूप के हाईएस्ट और होलीएस्ट होने से बाप की प्रत्यक्षता)

# *ಸಂಕಲ್ಪ, ವಾಣಿ ಮತ್ತು ಸ್ವರೂಪದ ಹೈಯೆಸ್ಟ್ ಮತ್ತು ಹೋಲಿಯೆಸ್ಟ್ (ಸರ್ವ ಶ್ರೇಷ್ಠ ಹಾಗೂ ಸಂಪೂರ್ಣ ಪವಿತ್ರ) ಆಗುವುದರಿಂದ ತಂದೆಯ ಪ್ರತ್ಯಕ್ಷತೆ*

ತಮ್ಮನ್ನು ಹೈಯೆಸ್ಟ್ ಮತ್ತು ಹೋಲಿಯೆಸ್ಟ್ ಎಂದು ತಿಳಿಯುತ್ತಾ ಪ್ರತಿಯೊಂದು ಸಂಕಲ್ಪ ಹಾಗೂ ಕರ್ಮವನ್ನು ಮಾಡುತ್ತಿರುತ್ತೀರಾ? ಹೈಯೆಸ್ಟ್ ಅರ್ಥಾತ್ ಸರ್ವಶ್ರೇಷ್ಠ ಬ್ರಾಹ್ಮಣ ಎಂದಾಗಿದೆ. ವಿರಾಟರೂಪದಲ್ಲಿ ಬ್ರಾಹ್ಮಣರಿಗೆ ಶಿಖೆಯ ಸ್ಥಾನವನ್ನು ಕೊಡಲಾಗಿದೆ. ಸ್ಥಾನವು ಹೇಗೆ ಶ್ರೇಷ್ಠವಾದ ಶಿಖೆಯಾಗಿದೆ, ಹಾಗೆಯೇ ಸ್ಥಾನದ ಜೊತೆಜೊತೆಗೆ ಸ್ಥಿತಿಯೂ ಶ್ರೇಷ್ಠ ವಾಗಿದೆಯೇ? ಶ್ರೇಷ್ಟವಾದ ಹೆಸರು ಹೇಗಿದೆಯೋ ಹಾಗೆಯೇ ಶ್ರೇಷ್ಠವಾದ ಸ್ಥಾನ ಮತ್ತು ಹಾಗೆಯೇ ಶ್ರೇಷ್ಠವಾದ ಕಾರ್ಯವಿರುತ್ತದೆ. ಹೇಗೆ ತಂದೆಯ ಗಾಯನ ಸರ್ವಶ್ರೇಷ್ಠ ಭಗವಂತ ಎಂದಿದೆ. ಅದೇರೀತಿ ಮಕ್ಕಳ ಗಾಯನವೂ ಇದೆ- ಸರ್ವಶ್ರೇಷ್ಠ ಬ್ರಾಹ್ಮಣರು. ಈ ಶ್ರೇಷ್ಠಸ್ಥಿತಿಯ ನೆನಪಾರ್ಥವು ಇಂದಿನವರೆಗೂ ಈ ರೀತಿ ನಡೆಯುತ್ತಾ ಬಂದಿದೆ - ಯಾವುದೇ ಶ್ರೇಷ್ಠಕರ್ತವ್ಯ ಅಥವಾ ಶುಭಕಾರ್ಯವನ್ನು ಮಾಡುತ್ತಾರೆಂದರೆ ನಾಮಧಾರಿ ಬ್ರಾಹ್ಮಣರಿಂದಲೇ ಮಾಡಿಸುತ್ತಾರೆ. ವರ್ತಮಾನ ಸಮಯದ ಶ್ರೇಷ್ಠಕರ್ಮದ ನೆನಪಾರ್ಥವು ಈಗಲೂ ಸಹ ಚೈತನ್ಯ ಸತ್ಯಬ್ರಾಹ್ಮಣನ ರೂಪದಲ್ಲಿ ನೋಡುತ್ತಾ ಮತ್ತು ಕೇಳುತ್ತಿರುತ್ತಾರೆ. ಶ್ರೇಷ್ಠಕರ್ಮದ ಮಹಿಮೆ ಹಾಗೂ ಗಾಯನವನ್ನೂ ಕೇಳುತ್ತಿದ್ದೀರಿ, ಇನ್ನೊಂದುಕಡೆ ಸ್ವಯಂ ತಾವು ಶ್ರೇಷ್ಠಪಾತ್ರವನ್ನು ಅಭಿನಯಿಸುತ್ತಿದ್ದೀರಿ, ನೆನಪಾರ್ಥ ಮತ್ತು ಪ್ರ್ಯಾಕ್ಟಿಕಲ್- ಇವೆರಡನ್ನೂ ಜೊತೆಜೊತೆಯಲ್ಲಿ ನೋಡುತ್ತಿದ್ದೀರಿ. ನೆನಪಾರ್ಥದಲ್ಲಿಯೂ ಸಹ ಇದು ಸಿದ್ಧವಾಗುತ್ತದೆ. ಎಷ್ಟು ಶ್ರೇಷ್ಠವಾಗಿದ್ದರು. ಈಗ ಇದ್ದೇವೆ ಮತ್ತು ನಂತರದಲ್ಲಿಯೂ ಆಗುತ್ತೇವೆ. ಹೇಗೆ ಬ್ರಾಹ್ಮಣರು ಶ್ರೇಷ್ಠವಾಗಿದ್ದಾರೆ. ಹಾಗೆಯೇ ಬ್ರಾಹ್ಮಣರ ಸಮಯವೂ ಸಹ ಎಲ್ಲಾ ಯುಗಗಳಿಗಿಂತಲೂ ಸರ್ವಶ್ರೇಷ್ಠ ಯುಗ ಅರ್ಥಾತ್ ಸಂಗಮಯುಗದ ಸಮಯ ಅರ್ಥಾತ್ ಅಮೃತವೇಳೆ ಅಥವಾ ಬ್ರಹ್ಮಮಹೂರ್ತದ ಸಮಯವಾಗಿದೆ. ಈ ಸರ್ವಶ್ರೇಷ್ಠ ಸ್ಥಿತಿಯು ಬ್ರಾಹ್ಮಣರಿಗೇ ಏಕೆ ಆಯಿತು? ಏಕೆಂದರೆ ಬ್ರಾಹ್ಮಣರೇ ಅತಿ ಶ್ರೇಷ್ಠವಾದ ಅಥವಾ ಶ್ರೇಷ್ಠವಾದ ಕರ್ತವ್ಯದಲ್ಲಿ ಸಹಯೋಗಿಗಳಾಗುವ ಶ್ರೇಷ್ಠಭಾಗ್ಯವನ್ನು ಪ್ರಾಪ್ತಿ ಮಾಡಿಕೊಳ್ಳುತ್ತಾರೆ. ತಮ್ಮ ಇಷ್ಟು ಶ್ರೇಷ್ಠವಾದ ಪಾತ್ರ, ಶ್ರೇಷ್ಠತಂದೆ, ಶ್ರೇಷ್ಠಸ್ಥಾನ ಮತ್ತು ಶ್ರೇಷ್ಠಸ್ಥಿತಿಯು ಸ್ಮೃತಿಯಲ್ಲಿ ಇರುತ್ತದೆಯೇ? ಇಡೀ ಕಲ್ಪದಲ್ಲಿ ಇಷ್ಟು ಶ್ರೇಷ್ಠವಾದ ಭಾಗ್ಯವು ಮತ್ತಾವುದೇ ಸಮಯದಲ್ಲಿಯೂ ಪ್ರಾಪ್ತಿ ಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ. ಇಂತಹ ಹೈಯೆಸ್ಟ್ ಮತ್ತೆ ಜೊತೆಜೊತೆಯಲ್ಲಿ ಹೋಲಿಯೆಸ್ಟ್‌ನ ನೆನಪಾರ್ಥವನ್ನು ಈಗಿನವರೆಗೂ ಕೇಳುತ್ತೀರಿ. ಜನರು ಬ್ರಾಹ್ಮಣರಿಗೆ ಬದಲಾಗಿ ತಮ್ಮ ದೇವತಾ ರೂಪದ ಗಾಯನ ಮಾಡುತ್ತಾರೆ.

ಹೋಲಿಯೆಸ್ಟ್ ಆಗಿರುವವರ ಗಾಯನವು ಯಾವುದಾಗಿದೆ? ಈಗಿನವರೆಗೂ ಕಮಲ ನಯನ, ಕಮಲ ಹಸ್ತ, ಕಮಲ ಮುಖದ ರೂಪದಲ್ಲಿ ಗಾಯನ ಮಾಡುತ್ತಿರುತ್ತಾರೆ. ಈಗ ಪ್ರ್ಯಾಕ್ಟಿಕಲ್‌ನಲ್ಲಿ ಪರಿಶೀಲನೆ ಮಾಡಿರಿ - ಪ್ರತಿಯೊಂದು ಕರ್ಮೇಂದ್ರಿಯಗಳು ಕಮಲದ ಸಮಾನ ಭಿನ್ನವಾಗಿವೆಯೇ? ಹೇಗೆ ಕಮಲವು ಸಂಬಂಧ ಹಾಗೂ ಸಂಪರ್ಕದಲ್ಲಿ ಬರುತ್ತಿದ್ದರೂ ಭಿನ್ನವಾಗಿದೆಯೋ ಹಾಗೆಯೇ ದೇಹ ಮತ್ತು ದೇಹದ ಸಂಬಂಧದ, ದೇಹದ ಈ ಹಳೆಯ ಪ್ರಪಂಚದ ಆಕರ್ಷಣೆಯಿಂದ ದೂರ(ಭಿನ್ನ)ವಾಗಿದೆಯೇ? ಯಾವುದೇ ಕರ್ಮೇಂದ್ರಿಯಗಳಿಂದ ಕೇಳುವ, ನೋಡುವ, ಮಾತನಾಡುವ ಆಸಕ್ತಿಯು ತನ್ನ ಕಡೆ ವಶೀಭೂತವನ್ನಾಗಿ

ಮಾಡಿಕೊಳ್ಳುವುದಿಲ್ಲವೇ? ವಶೀಭೂತವಾಗುವುದರ ಅರ್ಥವಾಗಿದೆ- ಹೋಲಿಯೆಸ್ಟ್ (ಸಂಪೂರ್ಣಪವಿತ್ರ)ನಿಂದ ಭೂತವಾಗಿಬಿಟ್ಟಂತೆ. ಯಾವಾಗ ಭೂತವಾಗಿಬಿಡುತ್ತಾರೆಂದರೆ ಭೂತದ ಕರ್ತವ್ಯವಾಗಿದೆ ದುಃಖಿಯಾಗುವುದು ಮತ್ತು ದುಃಖಿಯನ್ನಾಗಿ ಮಾಡುವುದು. ಅಂತಹವರು ನಂತರದಲ್ಲಿ ಹೈಯೆಸ್ಟ್ ಬ್ರಾಹ್ಮಣರಿಂದ ಶೂದ್ರರಾಗಿಬಿಡುತ್ತಾರೆ ಆದ್ದರಿಂದ ಸದಾ ಇದನ್ನು ಸ್ಮೃತಿಯಲ್ಲಿಟ್ಟುಕೊಳ್ಳಬೇಕು ನಾನು ಹೈಯೆಸ್ಟ್ ಮತ್ತು ಹೋಲಿಯೆಸ್ಟ್ ಆಗಿದ್ದೇನೆ. ಇದು ಯಾವಾಗ ಪ್ರತ್ಯಕ್ಷರೂಪದಲ್ಲಿ ಅಂದರೆ ಸಂಕಲ್ಪ ಮತ್ತು ಸ್ವರೂಪದಲ್ಲಿ ಸ್ಮೃತಿಯಿರುತ್ತಿರುತ್ತದೆಯೋ ಆಗಲೇ ಪ್ರತ್ಯಕ್ಷತೆಯ ವರ್ಷವನ್ನು ಆಚರಿಸಲು ಸಾಧ್ಯವಾಗುವುದು. ಸರ್ವಶ್ರೇಷ್ಠ ತಂದೆಯನ್ನು ಪ್ರತ್ಯಕ್ಷ ಮಾಡುವುದಕ್ಕಾಗಿ - ಎಲ್ಲಿಯವರೆಗೆ ಸ್ವಯಂ ತಾವು ಸ್ವರೂಪದಲ್ಲಿ ಹೋಲಿಯೆಸ್ಟ್ ಮತ್ತು ಹೈಯೆಸ್ಟ್ ಆಗುವುದಿಲ್ಲವೆಂದರೆ ತಂದೆಯನ್ನು ಹೇಗೆ ಪ್ರತ್ಯಕ್ಷ ಮಾಡುವಿರಿ? ಸ್ವಯಂನಲ್ಲಿ ತಂದೆಯ ಸಮಾನ ಗುಣಗಳು ಮತ್ತು ಕರ್ತವ್ಯವನ್ನು ಪ್ರಖ್ಯಾತ ಮಾಡುವುದೇ ತಂದೆಯನ್ನು ಪ್ರತ್ಯಕ್ಷ ಗೊಳಿಸುವುದಾಗಿದೆ. ಶ್ರೇಷ್ಠವಾದ ಕಾರ್ಯದಿಂದ ಶ್ರೇಷ್ಠವಾದ ತಂದೆಯ ಹೆಸರು ಪ್ರಸಿದ್ಧವಾಗುತ್ತದೆ. ತಮ್ಮ ಆತ್ಮೀಯ ಮೂರ್ತಿಯಿಂದ ಆತ್ಮಿಕ ತಂದೆಯ ಪ್ರತ್ಯಕ್ಷತೆಯನ್ನು ಮಾಡಬೇಕಾಗಿದೆ. ಪ್ರತಿಯೊಂದು ಆತ್ಮ ಪ್ರತಿಯೊಬ್ಬ ಬ್ರಾಹ್ಮಣನಲ್ಲಿ ಬ್ರಹ್ಮಾತಂದೆಯನ್ನು ನೋಡಬೇಕು. ರಚನೆಯು ತನ್ನ ರಚಯಿತನ್ನು ತೋರಿಸಬೇಕಾಗಿದೆ. ಪ್ರತಿಯೊಬ್ಬರ ಮುಖದಿಂದ ಒಂದೇ ಮಾತು ಬರಲಿ-ಸ್ವಯಂ ಭಗವಂತನು ಇವರ ಶ್ರೇಷ್ಠ ಅದೃಷ್ಟವನ್ನು ರೂಪಿಸಿದ್ದಾರೆ. ಪ್ರತಿಯೊಬ್ಬರ ಅದೃಷ್ಟವು ಬಾಪ್‌ದಾದಾರವರ ಚಹರೆಯನ್ನು ಪ್ರಸಿದ್ಧ ಮಾಡಲಿ. ಪ್ರತಿಯೊಬ್ಬರೂ ತಮ್ಮನ್ನು ಈ ರೀತಿ ದಿವ್ಯ-ಸ್ವಚ್ಛವಾದ ದರ್ಪಣವನ್ನಾಗಿ ಮಾಡಿಕೊಳ್ಳಬೇಕು. ಪ್ರತಿಯೊಬ್ಬರ ದರ್ಪಣದಿಂದ ಅನೇಕರಿಗೆ ಬಾಪ್‌ದಾದಾರವರ ಸಾಕ್ಷಾತ್ಕಾರವಾಗಬೇಕು. ಸಾಕ್ಷಾತ್ ತಂದೆಯ ಸಮಾನ ಸ್ಥಿತಿಯೇ ಬಾಬಾರವರ ಪ್ರತ್ಯಕ್ಷತೆಯನ್ನು ಮಾಡಿಸುತ್ತದೆ.

ಪ್ರತ್ಯಕ್ಷತೆಯ ವರ್ಷವನ್ನು ಆಚರಿಸುವುದರ ಅರ್ಥವಾಗಿದೆ. ಸ್ವಯಂನ್ನು ತಂದೆಯ ಸಮಾನ ಮಾಡಿಕೊಳ್ಳುವುದು. ಈ ಸ್ಥೂಲ ಸಾಧನಗಳಂತು ನಿಮಿತ್ತಮಾತ್ರ ಸಾಧನವಾಗಿದೆ. ಸದಾಕಾಲದ ಸಾಧನವು ಸಿದ್ಧಿ ಸ್ವರೂಪವಾಗಿರುವುದಾಗಿದೆ. ಸಿದ್ಧಿಸ್ವರೂಪವು ತಾನಾಗಿಯೇ ಸಿದ್ಧ ಮಾಡುತ್ತದೆ ಈ ರೀತಿ ಶ್ರೇಷ್ಠರನ್ನಾಗಿ ಮಾಡುವಂತವರು ಸರ್ವಶ್ರೇಷ್ಠ ಭಗವಂತನಾಗಿದ್ದಾರೆ. ಅಂದಮೇಲೆ ಸಾಧನಗಳ ಜೊತೆಜೊತೆಗೆ ಸಿದ್ಧಿಸ್ವರೂಪವನ್ನು ತಮ್ಮದನ್ನಾಗಿ ಮಾಡಿಕೊಳ್ಳಬೇಕಾಗಿದೆ. ಸಂಕಲ್ಪ, ವಾಣಿ ಮತ್ತು ಸ್ವರೂಪ- ಮೂರನ್ನೂ ಹೋಲಿಯೆಸ್ಟ್ ಮತ್ತು ಹೈಯೆಸ್ಟ್ ಆಗಿರಲಿ. ಇಂತಹ ಸ್ಥಿತಿಯಿಂದಲೇ ತಂದೆಯನ್ನು ಪ್ರತ್ಯಕ್ಷ ಮಾಡಲು ಸಾಧ್ಯವಾಗುತ್ತದೆ. ಬಾಪ್‌ದಾದಾರವರು ಮಕ್ಕಳ ಉಮ್ಮಂಗ, ಉತ್ಸಾಹ, ಶ್ರೇಷ್ಠಸಂಕಲ್ಪ, ಪರಿಶ್ರಮ ಮತ್ತು ಲಗನ್‌ನ್ನು ನೋಡಿ ಹರ್ಷಿತವಾಗುತ್ತಾರೆ ಆದರೆ ಭವಿಷ್ಯಕ್ಕಾಗಿ ಸಹಯೋಗ ಕೊಡುವುದಕ್ಕಾಗಿ ಯೋಚನೆಯನ್ನು ತಿಳಿಸುತ್ತಿದ್ದಾರೆ. ಎಲ್ಲರದೂ ಒಂದೇ ಸಂಕಲ್ಪವಿದೆ ಒಂದು ಸಂಕಲ್ಪದಲ್ಲಿ ಮಹಾನ್ ಶಕ್ತಿಯಿದೆ. ಏಕರಸ ಸ್ಥಿತಿಯಲ್ಲಿ ಸ್ಥಿತರಾಗಿದ್ದು ಈ ಸಂಕಲ್ಪವನ್ನು ಸ್ವರೂಪದಲ್ಲಿ ತರಬೇಕಾಗಿದೆ. ಕಲ್ಪ-ಕಲ್ಪದ ವಿಜಯದ ಅದೃಷ್ಟದ ಹೊಳಪಿನ ಗಾಯನವು ಈಗಲೂ ಇದೆ ಅಥವಾ ಸ್ಥಿರವಾಗಿದೆ. ಒಳ್ಳೆಯದು-

**ಈ ರೀತಿ ತಮ್ಮ ಅದೃಷ್ಟದ ಮೂಲಕ ಬಾಪ್‌ದಾದಾರವರ ಚಹರೆಯನ್ನು ಪ್ರತ್ಯಕ್ಷಗೊಳಿಸುವ, ಸದಾ ಕಮಲದ ಸಮಾನ, ಅಲ್ಪಕಾಲದ ಆಕರ್ಷಣೆಗಳಿಂದ ದೂರವಿರುವಂತಹ, ತಂದೆಯ ಸಮಾನ ಹೋಲಿಯೆಸ್ಟ್ ಮತ್ತು ಹೈಯೆಸ್ಟ್ ಸ್ವಮಾನದಲ್ಲಿ ಸ್ಥಿತರಾಗಿರುವ, ಪ್ರತಿಯೊಂದು ಆತ್ಮನದಲ್ಲಿ ತಂದೆಯ ಸ್ನೇಹವನ್ನು, ಸ್ವರೂಪವನ್ನು ಮತ್ತು ಸಂಬಂಧವನ್ನು ಪ್ರತ್ಯಕ್ಷಗೊಳಿಸುವಂತಹ, ಸರ್ವಶ್ರೇಷ್ಠ, ಶ್ರೇಷ್ಠಾತಿಶ್ರೇಷ್ಠ ಬ್ರಾಹ್ಮಣರಿಗೆ ಸರ್ವಶ್ರೇಷ್ಠ ತಂದೆಯ ನೆನಪು-ಪ್ರೀತಿ ಹಾಗೂ ನಮಸ್ತೆ.**

ಅವ್ಯಕ್ತ ಮುರಳಿ 23-01-1971--ಪಾರ್ಟ್-1

***ಸಂಕಲ್ಪ, ವಾಣಿ ಮತ್ತು ಸ್ವರೂಪದಲ್ಲಿ ಹೈಯೆಸ್ಟ್ ಮತ್ತು ಹೋಲಿಯೆಸ್ಟ್ (ಸರ್ವ ಶ್ರೇಷ್ಠ ಹಾಗೂ ಸಂಪೂರ್ಣ ಪವಿತ್ರ) ಆಗುವುದರಿಂದ ತಂದೆಯ ಪ್ರತ್ಯಕ್ಷತೆ.***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಶಕ್ತಿ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1.ನಾನು ಸ್ವಯಂ ಅನ್ನು ಸರ್ವಶ್ರೇಷ್ಠ ಮತ್ತು ಸಂಪೂರ್ಣ ಪವಿತ್ರವೆಂದು ಭಾವಿಸಿ ಪ್ರತಿಯೊಂದು ಸಂಕಲ್ಪ, ಕರ್ಮವನ್ನು ಮಾಡುತ್ತಿದ್ದೇನೆ.

2. ನಾನು ಶ್ರೇಷ್ಠ ಕರ್ತವ್ಯದಲ್ಲಿ ಸಹಯೋಗಿಯಾಗಿ ಶ್ರೇಷ್ಠ ಭಾಗ್ಯವನ್ನು ಪ್ರಾಪ್ತಿ ಮಾಡಿಕೊಂಡಿರುವ ಪ್ರಾಪ್ತಿ ಸ್ವರೂಪ.

3. ನಾನು ನನ್ನ ಪಾತ್ರವನ್ನು, ಸರ್ವಶ್ರೇಷ್ಠ ತಂದೆಯನ್ನು, ಶ್ರೇಷ್ಠ ಸ್ಥಾನ ಮತ್ತು ಶ್ರೇಷ್ಠ ಗೌರವವನ್ನು ಸದಾ ಸ್ಮೃತಿಯಲ್ಲಿಟ್ಟುಕೊಂಡಿದ್ದೇನೆ.

4. ನಾನು ಕಮಲ ಸಮಾನವಾಗಿ ಹಳೆಯ ಆಕರ್ಷಣೆಗಳಿಂದ ದೂರವಾಗಿರುತ್ತಾ ಸರ್ವಶ್ರೇಷ್ಠ ಮತ್ತು ಪವಿತ್ರ ಸ್ವರೂಪವನ್ನು ಸ್ಮೃತಿಯಲ್ಲಿಟ್ಟುಕೊಂಡು ನನ್ನ ಆತ್ಮಿಕ ಸ್ಥಿತಿಯಿಂದ ಆತ್ಮಿಕ ತಂದೆಯನ್ನು ಪ್ರತ್ಯಕ್ಷ ಮಾಡಿದ್ದೇನೆ.

5. ನನ್ನನ್ನು ನೋಡಿರುವ ಪ್ರತಿಯೊಬ್ಬರ ಬಾಯಿಂದ "ಸ್ವಯಂ ಭಗವಂತನೇ ಇವರ ಅದೃಷ್ಟವನ್ನು ರೂಪಿಸಿದ್ದಾರೆ" ಎಂಬ ಮಾತು ಬಂದಿತು.

6. ನಾನು ತಂದೆಯ ಸಮಾನವಾಗಿ ದಿವ್ಯ-ಸ್ವಚ್ಛವಾದ ದರ್ಪಣದಂತೆ ತಯಾರಾಗಿ ಆ ದರ್ಪಣದಿಂದ ಎಲ್ಲರಿಗೂ ಬಾಪ್‌ದಾದಾರವರ ಸಾಕ್ಷಾತ್ಕಾರ ಮಾಡಿಸಿದ್ದೇನೆ.

7. ನಾನು ಸಂಕಲ್ಪಗಳನ್ನು ಸ್ವರೂಪದಲ್ಲಿ ತಂದಿರುವ ಕಲ್ಪಕಲ್ಪದ ವಿಜಯೀ ಸ್ವರೂಪ.